KABR320074522016

**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ದೇವನಹಳ್ಳಿ.**

**ಸಿ.ಸಿ. ನಂ.5599/2016**

**ದಿನಾಂಕಃ 2ನೇ ಜುಲೈ 2026**

**ಉಪಸ್ಥಿತರುಃ ಶ್ರೀಮತಿ. ಚಂದ್ರಿಕಾ. ಕೆ. ಟಿ.** ಬಿಸಿಎ. ಎಲ್.ಎಲ್.ಬಿ.
ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ದೇವನಹಳ್ಳಿ.

**ಪಿರ್ಯಾದುದಾರರು** : ರಾಜ್ಯದ ಪರ ವಿಶ್ವನಾಥಪುರ ಪೋಲಿಸ್ ಠಾಣೆ,
**(ಸಹಾಯಕ ಸರ್ಕಾರಿ ಅಭಿಯೋಜಕರವರಿಂದ)**

**-: ವಿರುದ್ಧ :-**

**ಆರೋಪಿಗಳು** : ಎ1. ಬಾಬು ಬಿನ್ ನಾಗರಾಜಪ್ಪ,
ವಯಸ್ಸುಃ 40 ವರ್ಷ,
ವಾಸ ತಿಂಡ್ಲು ಗ್ರಾಮ,
ಕುಂದಾಣ ಹೋಬಳಿ,
ದೇವನಹಳ್ಳಿ ತಾಲ್ಲೂಕ್,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಎ2. ಮಧು. ಎಸ್ ಬಿನ್ ರಾಜಣ್ಣ,
ವಯಸ್ಸುಃ 23 ವರ್ಷ,
ವಾಸ ತಿಂಡ್ಲು ಗ್ರಾಮ,
ಕುಂದಾಣ ಹೋಬಳಿ,

ದೇವನಹಳ್ಳಿ ತಾಲ್ಲೂಕ್,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಎ3. ಕೀರಣ್. ಎಸ್ ಬಿನ್ ಕೃಷ್ಣಮೂರ್ತಿ
ವಯಸ್ಸುಃ 28 ವರ್ಷ,
ವಾಸ ತಿಂಡ್ಲು ಗ್ರಾಮ,
ಕುಂದಾಣ ಹೋಬಳಿ,
ದೇವನಹಳ್ಳಿ ತಾಲ್ಲೂಕ್,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಎ4. ಶಿವಪ್ಪ. ಎಸ್ ಬಿನ್ ಲೇಟ್ ನಾರಾಯಣಪ್ಪ,
ವಯಸ್ಸುಃ 45 ವರ್ಷ,
ವಾಸ ತಿಂಡ್ಲು ಗ್ರಾಮ,
ಕುಂದಾಣ ಹೋಬಳಿ,
ದೇವನಹಳ್ಳಿ ತಾಲ್ಲೂಕ್,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಎ5. ಮಧು ಟಿ.ಆರ್ ಬಿನ್ ಪಟಲಪ್ಪ,
ವಯಸ್ಸುಃ 26 ವರ್ಷ,
ವಾಸ ತಿಂಡ್ಲು ಗ್ರಾಮ,
ಕುಂದಾಣ ಹೋಬಳಿ,
ದೇವನಹಳ್ಳಿ ತಾಲ್ಲೂಕ್,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

**(ಶ್ರೀ. ಎಂ.ಸಿ.ಎಸ್ ವಕೀಲರಿಂದ ಎ1 ರಿಂದ ಎ5)**

* * * * * * * *

**ಪಿರ್ಯಾದುದಾರರ ಹೆಸರು** : **ಶ್ರೀ. ಮುನಿಅಂಜಿನಪ್ಪ**
**ಬಿನ್ ಲೇಟ್ ಮುನಿಶಾಮಪ್ಪ,**

| | | |
|---|---|---|
| **ಆಪಾದಿಸಲಾದ ಆಪಾದನೆಗಳು** | : | **ಭಾ.ದಂ.ಸಂ. ಕಲಂ. 143, 147, 504, 323, 324, 506 ಸಹವಾಚ 149** |
| **ಕೃತ್ಯ ನಡೆದ ದಿನಾಂಕ** | : | **11.10.2016** |
| **ಕೃತ್ಯ ವರದಿ ಮಾಡಿದ ದಿನಾಂಕ** | : | **10.10.2016** |
| **ಆಪಾದಿತನ ಬಂಧನ ದಿನಾಂಕ** | : | |
| **ಜಾಮೀನು ನೀಡಿದ ದಿನಾಂಕ** | : | |
| **ಆಪಾದಿತ ಬಂದನದಲ್ಲಿರುವ ದಿನಗಳು** | : | **- -** |
| **ಸಾಕ್ಷಿದಾರರ ಹೇಳಿಕೆ ಪ್ರಾರಂಭವಾದ ದಿನಾಂಕ** | : | **06.08.2019** |
| **ಸಾಕ್ಷಿದಾರರ ಹೇಳಿಕೆ ಮುಕ್ತಾಯದ ದಿನಾಂಕ** | : | **07.03.2026** |
| **ತೀರ್ಮಾನ ಹೊರಡಿಸುವ ದಿನಾಂಕ** | : | **02.07.2026** |

************

**<u>ತೀರ್ಪು</u>**

ವಿಶ್ವನಾಥಪುರ ಪೊಲೀಸ್ ಠಾಣೆಯ ಆರಕ್ಷಕ ಉಪನೀರಿಕ್ಷಕರು ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.143, 147, 504, 323, 324, 506 ಸಹವಾಚಕ 149ರಡಿಯಲ್ಲಿ ಅಪರಾಧವೆನಿಸಲ್ಪಟ್ಟ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯದ ಮುಂದೆ ಸಲ್ಲಿಸಿರುತ್ತಾರೆ.

**2. ಅಭಿಯೋಜನೆಯ ಪರ ಮೊಕದ್ದಮೆಯ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತಿದೆ:-** ವಿಶ್ವನಾಥಪುರ ಪೋಲಿಸ್ ಠಾಣಾ ವ್ಯಾಪ್ತಿಗೆ ಸೇರಿದ ದಿ 10.10.2016

ರಂದು ಸುಮಾರು 5.30 ಗಂಟೆ ಸಮಯದಲ್ಲಿ ತಿಂಡ್ಲು ಗ್ರಾಮದ ಸುಬ್ಬರಾಯಪ್ಪ ರವರ ಇಟ್ಟಿಗೆ ಗೂಡಿನ ನೇರದ ರಸ್ತೆಯಲ್ಲಿ ಚಾಸಾ-2 ರವರು ನಡೆದುಕೊಂಡು ಬರುತ್ತಿದ್ದಾಗ ಅಂಕಣ 12ರಲ್ಲಿ ಕಂಡ ಆರೋಪಿಗಳು ಅಕ್ರಮ ಗುಂಪು ಸೇರಿಕೊಂಡು ಹಿಂದಿನ ದ್ವೇಷದಿಂದ ವಿನಾಕಾರಣ ಏಕಾಏಕಿ ಚಾಸಾ-2 ರವರೊಂದಿಗೆ ಜಗಳ ತೆಗೆದು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈಯ್ದು 1ನೇ ಆರೋಪಿಯು ದೊಣ್ಣೆಯಿಂದ ಚಾಸಾ-2 ರವರ ಎಡಗೈಗೆ ಹೊಡೆದನು, 2ನೇ ರವರು ಚಾಸಾ-2 ರವರಿಗೆ ಕಾಲಿನಿಂದ ಹೊಟ್ಟೆಯ ಭಾಗಕ್ಕೆ ಹೊಡೆದು ನೋವುಂಟು ಮಾಡಿರುತ್ತಾರೆ. 3ನೇ ರವರು ಚಾಸಾ-2 ರವರಿಗೆ ಕಲ್ಲಿನಿಂದ ಬೆನ್ನಿಗೆ ಹಾಗೂ ಕಿವಿಯ ಹತ್ತಿರ ಹೊಡೆದು ರಕ್ತಗಾಯ ಮಾಡಿರುತ್ತಾರೆ. 4ನೇ ಆರೋಪಿಯು ಚಾಸಾ-2 ರವರಿಗೆ ಕೈಯಿಂದ ಗುದ್ದಿ ನೋವುಂಟು ಮಾಡಿರುತ್ತಾರೆ. 5ನೇ ರವರು ಚಾಸಾ-2 ರವರಿಗೆ ಕೈಯಿಂದ ಗುದ್ದಿ ಕಾಲಿನಿಂದ ಮೈಮೇಲೆ ಒದ್ದು ನೋವುಂಟು ಮಾಡಿರುತ್ತಾರೆ. 1 ರಿಂದ 5ನೇ ಆರೋಪಿಗಳು ಚಾಸಾ-2 ರವರಿಗೆ ನಿನ್ನನ್ನು ಇಷ್ಟಕ್ಕೆ ಬಿಡುವುದಿಲ್ಲ ಸಾಯಿಸಿ ಬಿಡುತ್ತೇವೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದು ಹಾಗೂ ಆರೋಪಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಲಿಖಿತ ದೂರನ್ನು ನೀಡಿದ್ದಾಗಿರುತ್ತದೆ.

**3.** ಆರೋಪಿಗಳು ವಕೀಲರ ಮುಖಾಂತರ ಹಾಜರಾಗಿ ನ್ಯಾಯಾಲಯದಿಂದ ಜಾಮೀನನ್ನು ಪಡೆದುಕೊಂಡು, ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರ ಅಡಿಯಲ್ಲಿ ಆರೋಪಿಗಳಿಗೆ ಅವರ ವಿರುದ್ಧವಿರುವ ದೋಷಾರೋಪಣೆ ಪಟ್ಟಿಯ ನಕಲನ್ನು ನೀಡಲಾಗಿದೆ. ಆರೋಪಿಗಳ ವಿರುದ್ಧ ದೋಷಾರೋಪಣೆಯನ್ನು ರಚಿಸಿ, ಓದಿ ವಿವರಿಸಿ ಹೇಳಲಾಗಿ ಆರೋಪಿಗಳು ತಾವು ಯಾವುದೇ ತಪ್ಪು ಮಾಡಿಲ್ಲವೆಂದೂ ಹಾಗೂ ವಿಚಾರಣೆಯಾಗಬೇಕೆಂದು ಹೇಳಿದ್ದರಿಂದ ಸಾಕ್ಷಿಗಳ ವಿಚಾರಣೆಗಾಗಿ ಪ್ರಕರಣವನ್ನು ನಿಗದಿಪಡಿಸಲಾಯಿತು.

**4.** ಅಭಿಯೋಜನೆಯ ಪರ ಹಾಜರುಪಡಿಸಿದ ಸಾಕ್ಷ್ಯಿಗಳ ವಿಚಾರಣೆಯಲ್ಲಿ ಚಾಸಾ.1ರವರನ್ನು ಪ್ರಾಸಾ.1ಎಂದು ಸಾಕ್ಷ್ಯ ವಿಚಾರಣೆಗೆ ಒಳಪಡಿಸಲಾಗಿರುತ್ತದೆ. ಚಾಸಾ.1 ರವರು ಈ ಕೇಸಿನ ಪಿರ್ಯಾದುದಾರರು ಆಗಿರುತ್ತಾರೆ. ಪ್ರಾ.ಸಾ.2 ರವರು ಈ ಪ್ರಕರಣದ ಗಾಯಾಳು ಸಾಕ್ಷಿಗಯಾಗಿರುತ್ತಾರೆ ಎಂಬುದು ಅಭಿಯೋಜನೆಯವರ ನಿಲುವಾಗಿರುತ್ತದೆ.

ಚಾಸಾ-3 ರಿಂದ ಚಾಸಾ-10 ರವರವರೆಗೆ ನ್ಯಾಯಾಲಯದಿಂದ ಹಲವಾರು ಬಾರಿ ಸಮನ್ಸ್, ವಾರೆಂಟ್‌ಗಳು ಹಾಗೂ ಪ್ರೊಕ್ಲಮೇಷನ್‌ಗಳನ್ನು ಜಾರಿ ಮಾಡಿದ್ದರೂ ಸಹ, ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ವಿಚಾರಣೆ ಮಾಡುವಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ. ಆ ಕಾರಣದಿಂದ ಅವರ ಸಾಕ್ಷ್ಯವು ಲಭ್ಯವಿರುವುದಿಲ್ಲ ಮತ್ತು ಅವರನ್ನು ಕೈಬಿಡಲಾಗಿದೆ. ಅಭಿಯೋಜನೆಯ ಪರ ಮೂರು ದಾಖಲೆಗಳನ್ನು ನಿಪಿ.1 ರಿಂದ 3 ಎಂದು ಗುರುತಿಸಿಕೊಂಡಿರುತ್ತಾರೆ.

**5.** ತದನಂತರ ದಂಡ ಪ್ರಕ್ರಿಯ ಸಹಿಂತೆ ಕಲಂ 313ರ ಅಡಿಯಲ್ಲಿ ಆರೋಪಿಗಳ ಹೇಳಿಕೆಗಳನ್ನು ಪಡೆದುಕೊಳ್ಳಲಾಗಿದೆ. ಆರೋಪಿಗಳು ತಮ್ಮ ಪರ ಯಾವುದೇ ಸಾಕ್ಷ್ಯ ವಿಚಾರಣೆ ಇರುವುದಿಲ್ಲವೆಂದು ತಿಳಿಸಿರುತ್ತಾರೆ.

**6.** ಸಹಾಯಕ ಸರ್ಕಾರಿ ಅಭೀಯೋಜಕರ ಹಾಗೂ ಆರೋಪಿಗಳ ಪರ ವಕೀಲರ ವಾದವನ್ನು ಕೇಳಿರುತ್ತೇನೆ. ಹಾಜರುಪಡಿಸಿದ ದಾಲಾತಿಗಳನ್ನು ಪರಿಶೀಲಿಸಿರುತ್ತೇನೆ.

**7. ಈ ನ್ಯಾಯಾಲಯವು ತೀರ್ಮಾನಿಸಬೇಕಾದ ಅಂಶಗಳ:-**

1. ಅಭಿಯೋಜನೆಯವರು ತಾನು ಪ್ರತಿಪಾದಿಸಿದಂತೆ ಸಂಶಯಾತೀತವಾಗಿ ಆರೋಪಿಗಳು ಏಕೋದ್ದೇಶದಿಂದ ದಿನಾಂಕಃ 10.10.2016 ರಂದು ಸಂಜೆ 5.30 ಗಂಟೆ ಸಮಯದಲ್ಲಿ ವಿಶ್ವನಾಥಪುರ ಪೊಲೀಸ್ ಠಾಣಾ ಸರಹದ್ದಿನ ತಿಂಡ್ಲು ಗ್ರಾಮದ ಸುಬ್ಬರಾಯಪ್ಪರವರ ಇಟ್ಟಿಗೆ ಗೂಡಿನ ನೇರದ ರಸ್ತೆಯಲ್ಲಿ ಚಾಸಾ-2 ರವರು ನಡೆದುಕೊಂಡು ಬರುತ್ತಿದ್ದಾಗ ಆರೋಪಿಗಳು ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದಿರುತ್ತಾರೆಂದು, ಆ ಮೂಲಕ ಭಾರತೀಯ ದಂಡ ಸಂಹಿಂತೆಯ ಕಲಂ.143 ಸಹವಾಚಕ ಕಲಂ 149 ರಡಿಯಲ್ಲಿ ಅಪರಾಧವೆಸಗಿದ್ದಿರೆಂದು ರುಜುವಾತುಪಡಿಸಿರುತ್ತಾರೆಯೇ?

2. ಅಭಿಯೋಜನೆಯವರು ತಾನು ಪ್ರತಿಪಾದಿಸಿದಂತೆ ಸಂಶಯಾತೀತವಾಗಿ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿಗಳು ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದ ದೊಂಬಿಯನ್ನು ಉಂಟುಮಾಡಿರುತ್ತಾರೆಂದು, ಆ ಮೂಲಕ ಭಾರತೀಯ ದಂಡ ಸಂಹಿಂತೆಯ ಕಲಂ.147 ಸಹವಾಚಕ ಕಲಂ 149ರಡಿಯಲ್ಲ್ಲಿ ಅಪರಾಧವೆಸಗಿದ್ದಿರೆಂದು ರುಜುವಾತುಪಡಿಸಿರುತ್ತಾರೆಯೇ?

3. ಅಭಿಯೋಜನೆಯವರು ತಾನು ಪ್ರತಿಪಾದಿಸಿದಂತೆ ಸಂಶಯಾತೀತವಾಗಿ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿಗಳು ಏಕೋದ್ದೇಶದಿಂದ ಹಳೆ ದ್ವೇಷದಿಂದ ವಿನಾಕಾರಣ ಏಕಾಏಕಿ ಚಾಸಾ-2 ರವರೊಂದಿಗೆ ಜಗಳ ತೆಗೆದು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದು, ಆ ಮೂಲಕ ಭಾರತೀಯ ದಂಡ ಸಂಹಿಂತೆಯ ಕಲಂ.504 ಸಹವಾಚಕ ಕಲಂ 149ರಡಿಯಲ್ಲಿ ಅಪರಾಧವೆಸಗಿದ್ದಿರೆಂದು ರುಜುವಾತುಪಡಿಸಿರುತ್ತಾರೆಯೇ?

4. ಅಭಿಯೋಜನೆಯವರು ತಾನು ಪ್ರತಿಪಾದಿಸಿದಂತೆ ಸಂಶಯಾತೀತವಾಗಿ ಆರೋಪಿಗಳು ಏಕೋದ್ದೇಶದಿಂದ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಂದು 1ನೇ ಆರೋಪಿ ದೊಣ್ಣೆಯಿಂದ ಚಾಸಾ-2 ರವರ ಎಡಗೈಗೆ ಹೊಡೆದು, 2ನೇ ಆರೋಪಿ ಚಾಸಾ-2 ರವರಿಗೆ ಕಾಲಿನಿಂದ ಹೊಟ್ಟೆಯ ಭಾಗಕ್ಕೆ ಹೊಡೆದಿರುತ್ತಾರೆ. 4ನೇ ಆರೋಪಿ ಕೈಯಿಂದ ಗುದ್ದಿರುತ್ತಾರೆ, 5ನೇ ಆರೋಪಿ ಕೈಯಿಂದ ಗುದ್ದಿ, ಕಾಲಿನಿಂದ ಮೈಮೇಲೆ ಒದ್ದು ನೋವುಂಟು ಮಾಡಿರುತ್ತಾರೆಂದು, ಆ ಮೂಲಕ ಭಾರತೀಯ ದಂಡ ಸಂಹಿಂತೆಯ

ಕಲಂ.323 ಸಹವಾಚಕ ಕಲಂ 149ರಡಿಯಲ್ಲಿ ಅಪರಾಧವೆಸಗಿದ್ದಿರೆಂದು ರುಜುವಾತುಪಡಿಸಿರುತ್ತಾರೆಯೇ?

5. ಅಭಿಯೋಜನೆಯವರು ತಾನು ಪ್ರತಿಪಾದಿಸಿದಂತೆ ಸಂಶಯಾತೀತವಾಗಿ ಆರೋಪಿಗಳು ಏಕೋದ್ದೇಶದಿಂದ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಂದು 3ನೇ ಆರೋಪಿ ಚಾಸಾ-2 ರವರಿಗೆ ಕಲ್ಲಿನಿಂದ ಬೆನ್ನಿಗೆ ಹಾಗೂ ಕಿವಿಯ ಹತ್ತಿರ ಹೊಡೆದು ರಕ್ತಗಾಯನವನ್ನುಂಟು ಮಾಡಿರುತ್ತಾರೆಂದು, ಆ ಮೂಲಕ ಭಾರತೀಯ ದಂಡ ಸಂಹಿಂತೆಯ ಕಲಂ.324 ಸಹವಾಚಕ ಕಲಂ 149ರಡಿಯಲ್ಲಿ ಅಪರಾಧವೆಸಗಿದ್ದಿರೆಂದು ರುಜುವಾತುಪಡಿಸಿರುತ್ತಾರೆಯೇ?

6. ಅಭಿಯೋಜನೆಯವರು ತಾನು ಪ್ರತಿಪಾದಿಸಿದಂತೆ ಸಂಶಯಾತೀತವಾಗಿ ಆರೋಪಿಗಳು ಏಕೋದ್ದೇಶದಿಂದ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿಗಳು ಚಾಸಾ-2ರವರಿಗೆ ನಿನ್ನನ್ನು ಇಷ್ಟಕ್ಕೆ ಬಿಡುವುದಿಲ್ಲ ಸಾಯಿಸಿ ಬಿಡುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆಂದು, ಆ ಮೂಲಕ ಭಾರತೀಯ ದಂಡ ಸಂಹಿಂತೆಯ ಕಲಂ.506 ಸಹವಾಚಕ ಕಲಂ 149ರಡಿಯಲ್ಲಿ ಅಪರಾಧವೆಸಗಿದ್ದಿರೆಂದು ರುಜುವಾತುಪಡಿಸಿರುತ್ತಾರೆಯೇ?

7. ಈ ಬಗ್ಗೆ ಆದೇಶವೇನು?

**8.** ಈ ಕೆಳಕಂಡ ಕಾರಣಗಳಿಂದಾಗಿ ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿರುತ್ತವೆ.

ಅಂಶ 1 ರಿಂದ 6 : **ನಕಾರಾತ್ಮಕವಾಗಿ**

ಅಂಶ 7 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ:-

## <u>ಕಾರಣಗಳು</u>

**9.** **<u>ಅಂಶ 1 ರಿಂದ 6:-</u>** ಈ ಅಂಶಗಳು ಒಂದಕ್ಕೊಂದು ಪೂರಕರವಾಗಿರುವುದರಿಂದ ಇವುಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

**10.** ಈ ಪ್ರಕರಣದಲ್ಲಿ ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ. 143, 147, 504, 323, 324, 506 ಸಹವಾಚಕ ಕಲಂ 149 ರ ಕೆಳಗೆ ಅಪರಾಧವೆಸಗಿರುವ ಕುರಿತು ದೋಷಾರೋಪಣೆ ಇದ್ದು, ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ತಮ್ಮ ಪರ ಸಾಕ್ಷ್ಯ ವಿಚಾರಣೆಗಾಗಿ ಪಿರ್ಯಾದುದಾರರನ್ನು ಹಾಜರುಪಡಿಸುವಲ್ಲಿ ಯಶಸ್ವಿಯಾಗಿರುತ್ತಾರೆ.

**11.** ಈ ಪ್ರಕಣರದಲ್ಲಿ ಪಿರ್ಯಾದುದಾರರಾದ ಚಾಸಾ.1 ಮುನಿಅಂಜಿನಪ್ಪ ರವರನ್ನು ಪ್ರಾಸಾ.1 ರವರನ್ನಾಗಿ ವಿಚಾರಣೆ ಮಾಡಿರುತ್ತಾರೆ. ಪ್ರಾಸಾ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿ 10.10.2026 ರಂದು ಸಂಜೆ 5.30 ಗಂಟೆಗೆ ಚಾಸಾ-2 ರವರು ಜುಟ್ಟನಹಳ್ಳಿ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ ಆರೋಪಿತರು ಚಾಸಾ-2 ರವರ ಮೇಲೆ ಗಲಾಟೆ ಮಾಡುತ್ತಿದ್ದರು. ಆರೋಪಿತರಲ್ಲಿ ಒಬ್ಬ ವ್ಯಕ್ತಿ ಚಾಸಾ-2 ರವರಿಗೆ ಎಡಕಿವಿಗೆ, ಎಡಭಾಗದ ಬೆನ್ನಿಗೆ ಕಲ್ಲಿನಿಂದ ಹಲ್ಲೆ ಮಾಡಿರುತ್ತಾರೆ. ಮತ್ತೊಬ್ಬ ಆರೋಪಿ ಕಾಲಿನಿಂದ ಒದ್ದಿ ಚರಂಡಿಗೆ ಹಾಕಿರುತ್ತಾರೆ. ಮತ್ತೊಬ್ಬ ಆರೋಪಿ ಕಲ್ಲಿನಿಂದ ತಲೆಗೆ ಚಾಸಾ-2 ರವರಿಗೆ ಹಲ್ಲೆ ಮಾಡಿರುತ್ತಾರೆ. ನಂತರ ಗಲಾಟೆ ನಡೆದ ಸ್ಥಳಕ್ಕೆ ನಾನು ಚಾಸಾ-3 ಮತ್ತು 4 ರವರು ಹೋಗಿ ಗಲಾಟೆ ಬಿಡಿಸಿ ಚಾಸಾ-2 ರವರನ್ನು ಮನೆಗೆ ಕರೆದುಕೊಂಡು ಬಂದಿರುತ್ತೇವೆ. ಅದೇ ದಿನ ಸಂಜೆ ಆರೋಪಿತರೆಲ್ಲರೂ ಸಂಜೆ 6.30 ಗಂಟೆಗೆ ಮನೆಯ ಬಳಿ ಬಂದು ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ ಎಂದು ಗಲಾಟೆ ಮಾಡಿರುತ್ತಾರೆ. ನಂತರ ಚಾಸಾ-2 ರವರನ್ನು ದೊಡ್ಡಬಳ್ಳಾಪುರ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಕೊಡಿಸಿರುತ್ತೇನೆ. ಮರುದಿನ ಸಂಜೆ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ನಾನು ದೂರು ನೀಡಿದ ಮರುದಿನ ಪೋಲಿಸರು ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ನಾನು ಸ್ಥಳ ತೋರಿಸಿದ ಮೇರೆಗೆ ಮಹಜರು ಮಾಡಿ ಕೃತ್ಯಕ್ಕೆ ಬಳಸಿದ ಕಲ್ಲನ್ನು ಮತ್ತು ದೊಣ್ಣೆಯನ್ನು ಅಮಾನತ್ತುಪಡಿಸಿರುತ್ತಾರೆ. ಮಹಜರಿಗೆ ನಾನಲ್ಲದೇ ಚಾಸಾ-5 ಮತ್ತು 6 ರವರು ಹಾಜರಿದ್ದರು. ಸಾಕ್ಷಿಗೆ ಮಹಜರನ್ನು ತೋರಿಸಲಾಗಿದೆ. ಸಾಕ್ಷಿಗೆ

ತೋರಿಸಿದ ದೊಣ್ಣೆಗಿಂತ ಸ್ವಲ್ಪ ಹಳೆಯದಾಗಿತ್ತು, ಕಲ್ಲು ತೋರಿಸಿರುವುದಕ್ಕಿಂತ ದೊಡ್ಡ ಗಾತ್ರದ್ದಾಗಿತ್ತು, ಚಾಸಾ-2 ರವರಿಗೆ ಹಲ್ಲೆ ಮಾಡಿದ ವ್ಯಕ್ತಿಗಳು ನ್ಯಾಯಾಲಯದ ಮುಂದಿರುವ ಆರೋಪಿತರು ಎಂದ ನುಡಿಯುತ್ತಾರೆ. ಸಾಕ್ಷಿಯು ತಾವು ನೀಡಿರುವ ದೂರನ್ನು ಹೊರತುಪಡಿಸಿ ಬೇರೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ.

**12.** ಪ್ರಾಸಾ-1 ರವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದ್ದು ತಮ್ಮ ಪಾಟೀ ಸವಾಲಿನಲ್ಲಿ ನನ್ನಗೂ ಮತ್ತು ಉದಯಕುಮಾರ್ ರವರಿಗೂ ಜಮೀನಿನ ಬೇಲಿ ಹಾಕುವ ವಿಚಾರದಲ್ಲಿ ಗಲಾಟೆಯಾಗಿತ್ತು. ಉದಯಕುಮಾರ್ ರವರಿಗೆ ಸೇರಿದ ಜಮೀನು ನಮಗೆ ಬರಬೇಕೆಂದು ಸಾಕ್ಷಿ-2 ರವರು ಇದೇ ನ್ಯಾಯಾಲಯದಲ್ಲಿ ಅಸಲು ದಾವೆ 530/2016 ಅನ್ನು ಹೂಡಿದ್ದಾರೆ ಎಂದರೆ ನಿಜ. ಚಾಸಾ-3 ರವರು 1ನೇ ಆರೋಪಿ ಮತ್ತು ಇತರೆ ಆರೋಪಿಗಳ ಮೇಲೆ ಖಾಸಗಿ ದೂರು ಸಲ್ಲಿಸಿರುತ್ತಾರೆ ಎಂಬ ವಿಚಾರಗಳನ್ನು ಅವರು ಒಪ್ಪಿ ಕೊಂಡಿರುತ್ತಾರೆ ಹಾಗೂ ಚಾಸಾ-2 ರವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿ ಒಂದು ದಿನ ದಾಖಲು ಮಾಡಿರುತ್ತೇವೆ. ಆ ದಿನ ಆಸ್ಪತ್ರೆಯಲ್ಲಿ ದಾಖಲಾಗಿದರಿಂದ ಅದೇ ದಿನ ದೂರು ನೀಡಲು ಸಾಧ್ಯವಾಗಿರುವುದಿಲ್ಲ, ಈ ಬಗ್ಗೆ ದೂರಿನಲ್ಲಿ ನಾನು ಹೇಳಿರುವುದಿಲ್ಲ ಎಂದು ನುಡಿದಿರುತ್ತಾರೆ ಹಾಗೂ ನಿಪಿ-2 ಮಹಜರಗೆ ಸಹಿ ಮಾಡಿರುತ್ತೇನೆ ಚಾಸಾ-6 ನನ್ನ ಅಳಿಯ ಎಂದು ಒಪ್ಪಿ ಕೊಂಡಿರುತ್ತಾರೆ ಹಾಗೂ ಪಾಟಿ ಸವಾಲಿನಲ್ಲಿ ಮಾಡಿದ್ದ ಇತರೆ ಸಲಹೆಗಳನ್ನು ಅಲ್ಲಗೆಳೆದಿರುತ್ತಾರೆ ಎಂದು ನುಡಿದಿರುತ್ತಾರೆ.

**13.** ಈ ಪ್ರಕಣರದಲ್ಲಿ ಗಾಯಾಳು ಸಾಕ್ಷಿ ಚಾಸಾ.2 ಭಾಸ್ಕರ ರವರನ್ನು ಪ್ರಾಸಾ.2 ರವರನ್ನಾಗಿ ವಿಚಾರಣೆ ಮಾಡಿರುತ್ತಾರೆ. ಪ್ರಾಸಾ.2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ-2 ನ್ಯಾಯಾಲಯದ ಮುಂದೆ ಇರುವ ಆರೋಪಿ ಯಾರೆಂದು ನನಗೆ ಗೊತ್ತು. ಈ ಪ್ರಕರಣದ ಸಂಬಂಧ ನನಗೆ ಏನು ಗೊತ್ತಿಲ್ಲ. ಆರೋಪಿಗಳಿದದಿ ನನಗೆ ಯಾವುದೇ ಹಲ್ಲೆ ಆಗಿಲ್ಲ, ಅವರು ನನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ. ನಾನು ವ್ಯವಸಾಯದ ಕೆಲಸ ಮಾಡುವಾಗ ಬಿದ್ದು ಪೆಟ್ಟುಮಾಡಿಕೊಂಡು, ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಅವರು ನ್ಯಾಯಾಲಯದ ಮುಂದೆ ಇರುವ ದೊಣ್ಣೆ ಮತ್ತು ಕಲ್ಲನ್ನು ನೋಡಿ ಗುರುತಿಸಿರುವುದಿಲ್ಲ.

**14.** ಈ ಹಂತದಲ್ಲಿ ಮಾನ್ಯ ಸಹಾಯಕ ಅಭಿಯೋಜಕರು ಪ್ರಾಸಾ.2 ರವರು ತನ್ನ ಹೇಳಿಕೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಿದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಿದ ನಂತರ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿನಲ್ಲಿ ಮಾಡಿದ ಸಲಹೆಯನ್ನು ಪ್ರಾಸಾ.2 ರವರು ಅಲ್ಲಗಳೆದಿದ್ದಾರೆ.

**15.** ಈ ಪ್ರಕರಣದಲ್ಲಿ ನಿಪಿ-1 ಮತ್ತು 2 ಸ್ಥಳಪಂಚನಾಮೆ, ನಿಪಿ-3 ಚಾಸಾ-2 ರವರ ಹೇಳಿಕೆಯಾಗಿರುತ್ತದೆ. ಅಭಿಯೋಜನೆಯ ಪ್ರಕಾರ ಆರೋಪಿಗಳು ದಿ 10.10.2016 ರಂದು ಸಂಜೆ 5.30 ಗಂಟೆ ಸಮಯದಲ್ಲಿ ಅಕ್ರಮವಾ ಗುಂಪು ಕಟ್ಟಿಕೊಂಡು ಬಂದು ಹಳೆಯ ದ್ವೇಷದಿಂದ ಚಾಸಾ-2 ರವರೊಂದಿಗೆ ಜಗಳವಾಡಿ ಅವರನ್ನು ಅವಾಚ್ಯ ಶಬ್ದಗಳಿಂದ ಬೈದು, 2ನೇ ಆರೋಪಿಯು ತನ್ನ ಕಾಲಿನಿಂದ ಅವರ ಹೊಟ್ಟೆಯ ಭಾಗಕ್ಕೆ ಹೊಡೆದು, 4ನೇ ಆರೋಪಿಯು ಕೈಯಿಂದ ಸಾಕ್ಷಿ-2 ರವರಿಗೆ ಗುದ್ದಿ, 5ನೇ ಆರೋಪಿಯು ಕೈಯಿಂದ ಗುದ್ದಿ, ಕಾಲಿನಿಂದ ಒದ್ದು, 1ನೇ ಆರೋಪಿಯು ದೊಣ್ಣೆಯಿಂದ ಅವರ ಎಡಗೈಗೆ ಹೊಡೆದು ಹಾಗೂ 3ನೇ ಆರೋಪಿಯು ಕಲ್ಲಿನಿಂದ ತನ್ನ ಬೆನ್ನಿಗೆ ಮತ್ತು ಕಿವಿಗೆ ಹೊಡೆದು ರಕ್ತಗಾಯ ಮಾಡಿರ ಎಲ್ಲರೂ ನಿನ್ನನ್ನು ಸಾಯಿಸದೆ ಬಿಡುವುದಿಲ್ಲ ಎಂದು ಪ್ರಾಣಬೆದರಿಕೆ ಹಾಕಿರುತ್ತಾರೆ ಎಂಬುದಾಗಿರುತ್ತದೆ. ಈ ಪ್ರಕರಣದಲ್ಲಿ ಚಾಸಾ-1ರವರು ಫಿರ್ಯಾದು ಸಾಕ್ಷಿಯಾಗಿರುತ್ತಾರೆ. ಪ್ರಾಸಾ-1 ರವರು ಘಟನಾ ಸಮಯದಲ್ಲಿ ಸಾಕ್ಷಿ-2ರವರೊಂದಿಗೆ ಇದ್ದು, ಘಟನೆಯನ್ನು ಕಣ್ಣಾರೆ ಕಂಡಿದ್ದರು ಅಥವ ಇಲ್ಲವೊ ಎಂಬ ಬಗ್ಗೆ ಸ್ಪಷ್ಟವಾಗಿ ಅಭಿಯೋಜನೆ ದಾಖಲಾತಿ ತೋರಿಸುವುದಿಲ್ಲ. ಘಟನಾ ಸಮಯದಲ್ಲಿ ಇವರು ಸಾಕ್ಷಿ-2 ರವರೊಂದಿಗೆ ಇದ್ದರೇ ಅಥವಾ ಘಟನೆಯನ್ನು ಕಣ್ಣಾರೆ ಕಂಡಿದ್ದರೇ ಎಂಬ ಬಗ್ಗೆ ಅಭಿಯೋಜನೆಯ ದಾಖಲೆಗಳು ಸ್ಪಷ್ಟಪಡಿಸುವುದಿಲ್ಲ.

**16.** ನಿಪಿ-1 ಪ್ರಥಮ ವರ್ತಮಾನ ವರದಿಯಾಗಿದ್ದು ಅದು ಪ್ರಥಮ ದಾಖಲಾಗಿರುತ್ತದೆ. ನಿಪಿ-1 ರಲಲಿ ಸಾಕ್ಷಿ-2 ರವರು ನಡೆದುಕೊಂಡು ಹೋಗುತ್ತಿದ್ದಾಗ ಆರೋಪಿಗಳು ಅವರ ಮೇಲೆ ಹಲ್ಲೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದಿದ್ದಾರೆ ಎಂಬ ಬಗ್ಗೆ ಮಾಹಿತಿ ಇರುತ್ತದೆ, ಆ ಸಮಯದಲ್ಲಿ ಚಾಸಾ-1 ರವರು ಎಲ್ಲಿದ್ದರು ಎಂಬ ಮಾಹಿತಿ ಇರುವುದಿಲ್ಲ. ಆ ಕಾರಣ

ಚಾಸಾ-1 ರವರು ಪ್ರತ್ಯಕ್ಷ ಸಾಕ್ಷಿದಾರರೇ ಅಥವಾ ಕೇವಲ ಫಿರ್ಯಾದು ಸಾಕ್ಷಿದಾರರೇ ಎಂಬ ಬಗ್ಗೆ ಅಭಿಯೋಜನೆ ಪ್ರಕರಣದಲ್ಲಿ ಕಂಡುಬರುವುದಿಲ್ಲ ಮತ್ತು ಪ್ರಾಸಾ-1 ರವರು ಆರೋಪಿಗಳು ಘಟನೆಯಾದ ನಂತರ ತಮ್ಮ ಮನೆಯ ಬಳಿ ಬಂದು ತಮಗೂ ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದು ನಿಪಿ-3 ರಲ್ಲಿ ನಮೂದಿಸಿರುತ್ತಾರೆ. ಆದರೆ ಪ್ರಾಸಾ-1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿಗಳು ಚಾಸಾ-2 ರವರೊಂದಿಗೆ ಗಲಾಟೆ ಮಾಡಿದಾಗ ತಾವು ಎಲ್ಲಿದ್ದರೂ ಎಂಬ ಬಗ್ಗೆಯು ತಮ್ಮ ಮುಖ್ಯ ವಿಚಾರಣೆಯಲ್ಲಿ ಸಾಕ್ಷಿದಲ್ಲಿ ಎಲ್ಲಿಯೂ ಹೇಳುವುದಿಲ್ಲ. ಪ್ರಾಸಾ-1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮಹಜರ್ ಸಮಯದಲ್ಲಿ ತಾವು ತೋರಿಸದ ಸ್ಥಳದಲ್ಲಿ ಮಹಜರ್ ಮಾಡಿದ್ದಾರೆಂದು ಹೇಳಿದ್ದರು. ಅಭಿಯೋಜನೆ ಪ್ರಕರಣದಂತೆ ಆರೋಪಿಗಳು ಹಲ್ಲೆಗೆ ಬಳಸಿದ್ದ ದೊಣ್ಣೆಯನ್ನು ಆ ಸ್ಥಳದಿಂದ ಪೋಲಿಸರು ಅಮಾನತ್ತು ಪಡಿಸಿಕೊಂಡಿರುವ ಬಗ್ಗೆ ಪ್ರಾಸಾ-**1** ವ್ಯತ್ತಿರಿಕ್ತವಾದ ಸಾಕ್ಷ್ಯ ನುಡಿದಿರುತ್ತಾರೆ. ಅವರು ನ್ಯಾಯಾಲಯದ ಮುಂದಿರುವ ದೊಣ್ಣೆ ಮತ್ತು ಕಲ್ಲನ್ನು ಸಹ ಗುರುತಿಸಿರುವುದಿಲ್ಲ ಮತ್ತು ಹಲ್ಲೆಗೆ ಬಳಸಲ್ಪಟ ದೊಣ್ಣೆ, ಕಲ್ಲುಗಳು ನ್ಯಾಯಾಲಯದ ಮುಂದೆ ಇದ್ದ ದೊಣ್ಣೆ ಕಲ್ಲುಗಳಿಗಿಂತ ವಿಭಿನ್ನವಾಗಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ ಮತ್ತು ಪಾಟೀಸವಾಲಿನಲ್ಲಿ ಹಳೆಯ ದ್ವೇಷವಿರುವ ಬಗ್ಗೆ ಹಾಗೂ ಜಮೀನಿನ ವಿಚಾರವಾಗಿ ಮನಸ್ತಾಪವಿರುವ ಬಗ್ಗೆ ಹಾಗೂ ಚಾಸಾ-3 ರವರು 1ನೇ ಆರೋಪಿ ಮತ್ತು ಇತರೆ ಆರೋಪಿಗಳ ಮೇಲೆ ನ್ಯಾಯಾಲಯದಲ್ಲಿ ಖಾಸಗಿ ದೂರು ನೀಡಿರುವ ಬಗ್ಗೆ ಹಾಗೂ ಸಾಕ್ಷಿ-2 ರವರು ಇದೇ ನ್ಯಾಯಾಲಯದಲ್ಲಿ ಆರೋಪಿಗಳ ವಿರುದ್ಧ ಅಸಲು ದಾವೆ ಸಂಖ್ಯೆ 530/2016 ದಾಖಲುಮಾಡುವ ಬಗ್ಗೆ ಒಪ್ಪಿಕೊಂಡಿದ್ದಾರೆ.

**17.** ಪ್ರಾಸಾ-1 ರವರ ಪ್ರಕಾರ ಸಾಕ್ಷಿ-2 ರವರನ್ನು ಈ ಹಲ್ಲೆಯಿಂದ ಅದಾ ಗಾಯಾಗಳಿಗಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದು ಅವರು ಆಸ್ಪತ್ರೆಯಲ್ಲಿ ಒಂದು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಆದರೆ ಕಡತದಲ್ಲಿದ್ದ ಗಾಯಾದ ಪ್ರಮಾಣ ಪತ್ರವನ್ನು ನೋಡಿದಾಗ ಚಾಸಾ-2 ರವರು ಒಳರೋಗಿಯಾಗಿ ಚಿಕಿತ್ಸೆ ಪಡೆದಿರುವ ಬಗ್ಗೆ ಎಲ್ಲಿಯೂ ಉಲ್ಲೇಖ ಇರುವುದಿಲ್ಲ. ಈ ಎಲ್ಲಾ ಸಾಕ್ಷ್ಯಗಳನ್ನು ಗಮನಿಸಿದಾಗ ಪ್ರಾಸಾ-1 ಘಟನೆಯ ಸ್ಥಳದಲ್ಲಿದ್ದು ಘಟನೆಯನ್ನು ಕಣ್ಣಾರೆ ಕಂಡಿರುವ ಬಗ್ಗೆ ಹಾಗೂ ಪ್ರಾಸಾ-1 ರವರು ಹಲ್ಲೆ ಬಳಸಲ್ಪಟ್ಟ ದೊಣ್ಣೆ, ಕಲ್ಲುಗಳನ್ನು ಗುರುತಿಸದೆ ಇರುವುದನ್ನು ಗಮನಿಸಿದಾಗ ಪ್ರಾಸಾ-1 ರವರು ಸ್ಥಳದಲ್ಲಿ ಘಟನೆಯನ್ನು

ಕಣ್ಣಾರೆ ಕಂಡಿರುವ ಬಗ್ಗೆ ಅನುಮಾನ ಬರುತ್ತದೆ. ಆ ಕಾರಣ ಮತ್ತು ತಮ್ಮ ಪಾಟೀಸವಾಲಿನಲ್ಲಿ ತಾವು ಒಪ್ಪಿ ಕೊಂಡಿರುವ ಕೇಲವು ಮಾಹಿತಿಗಳಂತೆ ಪ್ರಾಸಾ-1 ರವರ ಕುಟುಂಬದವರು ಅಥವಾ ಆರೋಪಿಗಳ ನಡುವೆ ಜಮೀನಿಗೆ ಬೇಲಿ ಹಾಕುವ ವಿಚಾರದಲ್ಲಿ ವೈಮನಸ್ಸು ಇರುವುದು ಕಂಡುಬರುತ್ತದೆ. ಈ ಎಲ್ಲಾ ವಿಷದಾಗಳನ್ನು ಗಮನಿಸಿದಾಗ ಪ್ರಾಸಾ-1 ರವರು ಆರೋಪಿಗಳು ಚಾಸಾ-2 ರವರಿಗೆ ಹಲ್ಲೆ ಮಾಡಿರುವ ವಿಚಾರವನ್ನು ಕಣ್ಣಾರೆ ಕಂಡ ರೀತಿಯಲ್ಲಿ ಸಾಕ್ಷ್ಯ ನುಡಿದಿರುವ ಬಗ್ಗೆ ಅನುಮಾನ ಉಂಟಾಗುತ್ತದೆ. ಆ ಕಾರಣ ಅವರ ಸಾಕ್ಷ್ಯವನ್ನು ಪರಿಗಣಿಸಲಾಗುವುದಿಲ್ಲ. ಆ ಕಾರಣ ಅವರ ಸಾಕ್ಷ್ಯವನ್ನು ಸಂಪೂರ್ಣವಾಗಿ ನಂಬಲಾಗುವುದಿಲ್ಲ.

**18.** ಪ್ರಾಸಾ-2 ರವರು ಈ ಪ್ರಕರಣ ಪ್ರಮುಖ ಸಾಕ್ಷಿಯಾಗಿರುತ್ತಾರೆ. ಪ್ರಾಸಾ-2 ರವರ ಗಾಯಾಳು ಸಾಕ್ಷಿಯಾಗಿರುತ್ತಾರೆ. ಅವರು ಅಭಿಯೋಜನೆಗೆ ವ್ಯತ್ತಿರಿಕ್ತವಾಗಿ ಸಾಕ್ಷ್ಯವಾಗಿ ನುಡಿದಿರುತ್ತಾರೆ. ಅಭಿಯೋಜನೆಯಂತೆ ಪ್ರಾಸಾ-2 ರವರ ಆರೋಪಿಗಳಿಂದ ಹಲ್ಲೆಯಾಗಿರುತ್ತದೆ. ಆರೋಪಿಗಳು ಪ್ರಾಸಾ-2 ರವರ ಜಗಳ ಮಾಡಿರುತ್ತಾರೆ ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿರುತ್ತಾರೆ. ಆದರೆ ಪ್ರಾಸಾ-2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿಗಳು ತಮ್ಮ ಮೇಲೆ ಹಲ್ಲೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದು ಬೆದರಿಕೆ ಹಾಕಿಲ್ಲ ನಾನು ವ್ಯವಸಾಯದಲ್ಲಿ ಕೆಲಸ ಮಾಡುವಾಗ ಬಿದ್ದು ಪೆಟ್ಟು ಮಾಡಿಕೊಂಡು ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ ಹಾಗೂ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಅಭಿಯೋಜನೆ ಮಾಡಿದ ಪಾಟೀಸವಾಲಿನಲ್ಲಿ ಸಹ ಅವರ ಹೇಳಿಕೆಯಲ್ಲಿ ನೀಡಿದ ವಿಚಾರಗಳನ್ನು ನಿರಾಕರಿಸಿರುತ್ತಾರೆ. ಈ ಎಲ್ಲಾ ವಿಚಾರಗಳನ್ನು ಗಮನಿಸಿದಾಗ ಈ ಪ್ರಕರಣದಲ್ಲಿ ಪ್ರಮುಖ ಸಾಕ್ಷಿಯಾಗಿದ್ದ ಪ್ರಾಸಾ-2 ರವರು ಅಭಿಯೋಜನೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಪ್ರಾಸಾ**-2** ರವರ ಪೂರಕ ಸಾಕ್ಷ್ಯವಿಲ್ಲದೇ ಕೇವಲ ಪ್ರಾಸಾ-1 ರವರ ಸಾಕ್ಷ್ಯಾಧಾರದ ಮೇರೆ ಆರೋಪಿಗಳಿಂದ ಅಪರಾಧ ಆಗಿದೇ ಎಂಬದನ್ನು ಸಂಶಯಾತೀತವಾಗಿ ಸಾಭಿತುಪಡಿಸುವಲ್ಲಿ ಅಭಿಯಾಜನೆಯು ವಿಫಲಗೊಂಡಿರುತ್ತದೆ ಮತ್ತು ಈ ಪ್ರಕರಣದಲಲಿ ಉಳಿದ ಪ್ರತ್ಯಕ್ಷ ಸಾಕ್ಷಿಗಳು, ಮಹಜರ್ ಸಾಕ್ಷಿಗಳು, ವೈದ್ಯಕೀಯಾ ಸಾಕ್ಷಿಗಳು ಹಾಗೂ ತನಿಖಾಧಿಕಾರಿಗಳಿಗೆ ಹಲವಾರು ಬಾರಿ ನ್ಯಾಯಾಲಯದ ಸಮನ್ಸ್ ವಾರೆಂಟ್ ಜಾರಿಯಾಗಿದ್ದರು ಸಹ ಅಭಿಯೋಜನೆಯು ಸಹ ಅವರನ್ನು ವಿಚಾರಣೆ ಮಾಡುವಲ್ಲಿ ವಿಫಲವಾಗಿರುತ್ತದೆ. ಆ ಕಾರಣ ಈ ಎಲ್ಲಾ ಸಾಕ್ಷಿಗಳ

ಪೂರಕ ಸಾಕ್ಷ್ಯವಿಲ್ಲದೇ ಕೇವಲ ಪ್ರಾಸಾ-1 ರವರ ಸಾಕ್ಷ್ಯವನ್ನು ಆಧಾರಿಸಿ ಆರೋಪಿಗಳ ವಿರುದ್ಧ ಹೊರಿಸಲಾದ ಆರೋಪವನ್ನು ಸಂಶಯಾತೀತವಾಗಿ ಸಾಭಿತುಪಡಿಸಲು ಅಭಿಯೋಜನೆಯು ವಿಫಲವಾಗೊಂಡಿರುವುದರಿಂದ ಸದರಿ ಸಂಶಯ ಲಾಭವನ್ನು ಆರೋಪಿಗಳಿಗೆ ನೀಡಬೇಕಾಗಿರುತ್ತದೆ.

**19.** ಈ ಪ್ರಕರಣದಲ್ಲಿ ಪಿರ್ಯಾದುದಾರರಾದ ಪ್ರಾಸಾ.1 ಹಾಗೂ ಗಾಯಾಳು ಸಾಕ್ಷಿಗಳಾದ ಪ್ರಾಸಾ.2 ರವರು ಅಭಿಯೋಜನೆಯು ಪ್ರಕರಣವನ್ನು ಪುಷ್ಟಿಕರಿಸು ರೀತಿಯಲ್ಲಿ ಸಾಕ್ಷ್ಯ ನೀಡಿರುವುದಿಲ್ಲ. ಆದ್ದರಿಂದ ಅಭಿಯೋಜನೆಯವರು ಆರೋಪಿಗಳ ಮೇಲೆ ಆಪಾದಿಸಿದಂತೆ ಆರೋಪಗಳನ್ನು ನಿಸ್ಸಂಶಯವಾಗಿ ಸಾಬೀತುಪಡಿಸುವಲ್ಲಿ ವಿಫಲರಾಗಿರುತ್ತಾರೆ. ಆದ್ದರಿಂದ ಆರೋಪಿಗಳ ವಿರುದ್ಧ ಆಪಾದಿಸಲಾದ ಆಪಾದನೆಗಳನ್ನು ಪುಷ್ಠಿಕರಿಸುವ ಸಾಕ್ಷ್ಯವು ನ್ಯಾಯಾಲಯದ ಮುಂದೆ ಲಭ್ಯವಿಲ್ಲದ ಕಾರಣ ಸಂಶಯ ಲಾಭವನ್ನು ಪಡೆಯಲು ಆರೋಪಿಗಳು ಅರ್ಹರಾಗಿದ್ದಾರೆಂದು ನ್ಯಾಯಾಲಯವು ಪರಗಣಿಸುತ್ತಾ 1 ರಿಂದ 6 ಅಂಶಗಳಿಗೆ ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.

**20**. **ಅಂಶ 7:-** ಈ ಮೇಲ್ಕಂಡ ಕಾರಣಗಳಿಂದಾಗಿ, ನಾನು ಈ ಅಂಶವನ್ನು ಕೆಳಕಂಡಂತೆ ಆದೇಶ ಮಾಡುತ್ತೇನೆ.

**ಆದೇಶ**

ಆರೋಪಿಗಳ ವಿರುದ್ಧ ಹೊರಿಸಲಾದ ಭಾರತೀಯ ದಂಡ ಸಂಹಿತೆಯ ಕಲಂ. 143, 147, 504, 323, 324, 506, ಸಹವಾಚಕ ಕಲಂ 149 ರಡಿಯಲ್ಲಿನ ದೋಷಾರೋಪಣೆಗಳಿಂದ ನಿರ್ದೋಷಿಗಳೆಂದು ತೀರ್ಮಾನಿಸಿ, ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರಡಿಯಲ್ಲಿ ಬಿಡುಗಡೆ ಮಾಡಲಾಗಿದೆ.

ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡಿರುವ ಹಾಗೂ ಮಾಲು ಪಟ್ಟಿ ಸಂಖ್ಯೆ:91/2016ರಲ್ಲಿ ನಮೂದಿಸಲಾಗಿರುವ ದೊಣ್ಣೆ ಮತ್ತು ಕಲ್ಲನ್ನು ಮೇಲ್ಮನವಿ ಸಲ್ಲಿಸುವ ಅವಧಿ ಮುಗಿದ ನಂತರ ನಾಶಪಡಿಸಬೇಕೆಂದು ಆದೇಶಿಸಲಾಗಿರುತ್ತದೆ.

ಆರೋಪಿಗಳು ಹಾಗೂ ಅವರ ಜಾಮೀನುದಾರರ ಮುಚ್ಚಳಿಕೆ ಪತ್ರವು ಸಿ.ಆರ್.ಪಿ.ಸಿ. ತಿದ್ದುಪಡಿ ಕಾಯ್ದೆ ಕಲಂ.437ಎ ರಡಿಯಲ್ಲಿ 6 ತಿಂಗಳ ಅವಧಿಯವರೆಗೆ ಜಾರಿಯಲ್ಲಿರುತ್ತದೆ.

(ಮೇಲಿನ ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನವನ್ನು ನೀಡಿ, ಬೆರಳಚ್ಚು ಮಾಡಿದ್ದು, ನನ್ನಿಂದ ಸೂಕ್ತವಾಗಿ ತಿದ್ದುಪಡಿಯಾದ ನಂತರ, ಮುಕ್ತ ನ್ಯಾಯಾಲಯದಲ್ಲಿ ತೀರ್ಪನ್ನು **ದಿನಾಂಕಃ 2ನೇ ಜುಲೈ** 2026 ರಂದು ಘೋಷಿಸಲಾಯಿತು)

**(ಚಂದ್ರಿಕಾ. ಕೆ. ಟಿ.)**
**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೇವನಹಳ್ಳಿ.**

## ಅನುಬಂಧ

**ಅಭಿಯೋಜನೆಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳು:-**

ಪ್ರಾಸಾ.1 - ಮುನಿಅಂಜಿನಪ್ಪ

ಪ್ರಾಸಾ.2 - ಭಾಸ್ಕರ್

**ಅಭಿಯೋಜನೆಯ ಪರ ದಾಖಲಿಸಲ್ಪಟ್ಟ ದಾಖಲೆಗಳು:-**

ನಿಪಿ.1 - ದೂರು

ನಿಪಿ.1(ಎ) - ಪ್ರಾಸಾ.1 ರವರ ಸಹಿ

ನಿಪಿ.2 - ಮಹಜರ್

ನಿಪಿ.2(ಎ) - ಪ್ರಾಸಾ.2 ರವರ ಸಹಿ

ನಿಪಿ.3 - ಹೇಳಿಕೆ

**ಅಭಿಯೋಜನೆಯ ಪರ ವಿಚಾರಣೆಯಲ್ಲಿ ಗುರುತಿಸಲ್ಪಟ್ಟ ಮುದ್ದೆಮಾಲುಗಳು:-**

**- ಇಲ್ಲ -**

**ಆರೋಪಿತರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳು:-**

**- ಇಲ್ಲ -**

**ಆರೋಪಿತರ ಪರ ದಾಖಲಿಸಲ್ಪಟ್ಟ ದಾಖಲೆಗಳು:-**

**- ಇಲ್ಲ -**

**(ಚಂದ್ರಿಕಾ. ಕೆ. ಟಿ.)**

**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೇವನಹಳ್ಳಿ.**